**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹನುಮಂತಪ್ಪ ಆರ್ ನಿರಾಣಿ ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನಾ ಸಂಖ್ಯೆ:104 ಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆಗೆ ಉತ್ತರ.**

**ವಿಷಯ :** ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಉತ್ಪಾದಿಸುವ ವಿದ್ಯುತ್‌ನ್ನು ಸರ್ಕಾರ ಪಿ.ಪಿ.ಎ. (Power Purchase Agreement) ಮಾಡಿಕೊಳ್ಳದೆ ಇರುವ ಕುರಿತು ಮತ್ತು ಇದರಿಂದಾಗಿ ಸಕ್ಕರೆ ಕಾರ್ಖಾನೆಗಳು ಹಾನಿ ಅನುಭವಿಸುತ್ತಿವೆ ಹಾಗೂ ರೈತರಿಗೆ ಕಬ್ಬಿನ ಹಣ ಪಾವತಿ ಮಾಡಲು ತೊಂದರೆ ಆಗುತ್ತಿರುವುದರ ಬಗ್ಗೆ ಚರ್ಚಿಸಲು ವಿದ್ಯುತ್ ಕೊರತೆ ಇರುವ ಈ ಸಂದರ್ಭದಲ್ಲಿ ತಕ್ಷಣವೇ ಸರ್ಕಾರದ ವತಿಯಿಂದ ಕಾರ್ಖಾನೆಯೊಂದಿಗೆ ಪಿ.ಪಿ.ಎ ಮಾಡಿಕೊಳ್ಳಲು ಸೂಕ್ತಕ್ರಮ ಕೈಗೊಳ್ಳುವಂತೆ ಈ ಮೂಲಕ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

*****

ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಮಧ್ಯಮಾವಧಿ ಮತ್ತು ಧೀರ್ಘಾವಧಿ ಅಡಿಯಲ್ಲಿ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಮಧ್ಯಮಾವಧಿಗೆ ಒಟ್ಟು 500 ಮೆ.ವ್ಯಾ ವಿದ್ಯುತ್ ಖರೀದಿ ಒಪ್ಪಂದಗಳು ಜನವರಿ 2022ರಲ್ಲಿ ಅಂತ್ಯಗೊಂಡಿದ್ದು ಬಾಕಿ ಉಳಿದ ಸುಮಾರು 155 ಮೆ.ವ್ಯಾ ವಿದ್ಯುತ್ ಖರೀದಿ ಒಪ್ಪಂದಗಳು 2023 ರಲ್ಲಿ ಅಂತ್ಯಗೊಳ್ಳುತ್ತವೆ. ಎಸ್ಕಾಂಗಳ ಜೊತೆಗೆ ಸಕ್ಕರೆ ಕಾರ್ಖಾನೆಗಳು ದೀರ್ಘಾವದಿ ವಿದ್ಯುತ್ ಖರೀದಿ (347.84 MW) ಒಪ್ಪಂದಗಳನ್ನು ಮುಂದುವರಿಸಿರುತ್ತವೆ.

ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿಗೆ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ.

- ಮೆ|| ಪಿ.ಆರ್.ಡಿ.ಸಿ.ರವರು ವರದಿಯನ್ವಯ ರಾಜ್ಯವು ಆರ್ಥಿಕ ವರ್ಷ 2024-25ರ ವರೆಗೆ ಬೇಡಿಕೆಗಿಂತಲೂ ವಿದ್ಯುತ್ ಲಭ್ಯತೆ ಹೆಚ್ಚಿರುತ್ತದೆ ಎಂದು ತಿಳಿಸಿರುತ್ತಾರೆ.

ಎಸ್ಕಾಂಗಳು/ಪಿ.ಸಿ.ಕೆ.ಎಲ್ ಜೂನ್ 2018 ರಿಂದ ಅಲ್ಪಾವದಿ/ಮಧ್ಯಮ ಅವಧಿಯ ಮೂಲಕ ಯಾವುದೇ ವಿದ್ಯುತ್‌ನ್ನು ಖರೀದಿಸಿಲ್ಲ. ಪ್ರಸ್ತುತ ರಾಜ್ಯವು ಹೆಚ್ಚುವರಿ ವಿದ್ಯುತ್‌ನ್ನು ಐ.ಇ.ಎಕ್ಸ್ / ಪಿಎಕ್ಸ್‌ಐಎಲ್ ವಿದ್ಯುತ್ ವಿನಿಮಯ ಕೇಂದ್ರಗಳು ಹಾಗೂ Deep e portal ಟೆಂಡರ್‌ಗಳಲ್ಲಿ ಭಾಗವಹಿಸಿ ಆಯಾ ಬ್ಲಾಕ್‌ಗಳಲ್ಲಿ ಹೆಚ್ಚುವರಿಯಾಗಿರುವ ವಿದ್ಯುತ್‌ನ್ನು ಮಾರಾಟ ಮಾಡಲಾಗುತ್ತಿದೆ.

- ಕೆ.ಇ.ಆರ್.ಸಿ ರವರ clause 21 of conditions of licensee for ESCOMs Regulation 2004 ಪ್ರಕಾರ ವಿದ್ಯುತ್ ಖರೀದಿಗೆ ಅನುಮೋದನೆ ಪಡೆಯಬೇಕಾಗಿರುತ್ತದೆ.
- ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶ ದಿನಾಂಕ: 05.06.2018 ರಲ್ಲಿ ನಿರ್ದೇಶಿಸಿದಂತೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಬಗಾಸ್ ಆಧಾರಿತ ಸಹವಿದ್ಯುತ್ ಘಟಕಗಳಿಂದ ಖರೀದಿಸುವ ವಿದ್ಯುತ್‌ನ್ನು ಮುಂದಿನ ದಿನಗಳಲ್ಲಿ Competitive – reverse bidding ಮುಖಾಂತರವೇ ಮಾಡಬೇಕಾಗಿರುತ್ತದೆ.
- ಕೆ.ಇ.ಆರ್.ಸಿ ರವರು ಸಕ್ಕರೆ ಕಾರ್ಖಾನೆಗಳಿಗೆ ನಿರ್ಧರಿಸಿರುವ ಪ್ರಸ್ತುತ ದರವು ಪ್ರತಿ ಯೂನಿಟ್ ಗೆ ರೂ.5 ರಿಂದ 6 ಆಗಿರುತ್ತದೆ. ಆದರೆ, ಮಾರುಕಟ್ಟೆಯಲ್ಲಿ ಸೋಲಾರ್ ಮತ್ತು ಪವನ ವಿದ್ಯುತ್ ಮೂಲಗಳಿಗೆ ಸ್ಪರ್ಧಾತ್ಮಕ ಬಿಡ್ ಮೂಲಕ ನಿಗದಿಯಾದ ದರವು ಪ್ರತಿ ಯೂನಿಟ್ ಗೆ ರೂ.3 ಕ್ಕಿಂತ ಕಡಿಮೆಯಿರುತ್ತದೆ.

ಸಂಖ್ಯೆ: ಎನರ್ಜಿ 226 ಇಬಿಎಸ್ 2022

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು

C 104